ಇ) ಬೆಂಗಳೂರಿನಲ್ಲಿ 4 ಸಂಚಾರಿ ನೇತ್ರ ಆಸ್ಪತ್ರೆಗಳಿವೆ. (1 ಆಸ್ಪತ್ರೆ ಸರ್ಕಾರವೂ ಹಾಗೂ ಉಳಿದ 3 ಆಸ್ಪತ್ರೆಗಳು ಖಾಸಗಿಯವರಿಂದ ಕಾರ್ಯ ನಿರ್ವಹಿಸುತ್ತಿವೆ)

ಈ) ಹೌದು. ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಸಂಚಾರಿ ನೇತ್ರ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ.

ಉ) ಅನ್ವಯಿಸುವುದಿಲ್ಲ.

ಅಕ್ಕಿತಿಮ್ಮನ ಹಳ್ಳಿಯ ಕ್ರೀಡಾಂಗಣ ನಿರ್ಮಾಣದ ಹಂತದಲ್ಲಿ ಕುಸಿದ ಬಗ್ಗೆ

2251 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ಕಿ ತಿಮ್ಮನಹಳ್ಳಿಯ ಬಳಿ ನಿರ್ಮಿಸುತ್ತಿರುವ ಕ್ರೀಡಾಂಗಣ ಇತ್ತೀಚಿನ ಮಳೆಗೆ ಕುಸಿದು ಬಿದ್ದಿದ್ದು ನಿಜವಲ್ಲವೇ?

ಆ) ಇದರಿಂದ ಎಷ್ಟು ಜನರು ಮೃತಪಟ್ಟರು?

ಇ) ಇದಕ್ಕೆ ಕಾರಣಗಳೇನು?

ಈ) ಈ ಕ್ರೀಡಾಂಗಣದ ಕೆಲಸ ಕಳಪೆಯಾಗಿರುವುದು ಕುಸಿತಕ್ಕೆ ಕಾರಣವೇ?

ಉ) ಈ ಕ್ರೀಡಾಂಗಣದ ನಿರ್ಮಾಣ ಕಾರ್ಯ ಇದರಿಂದ ಕುಂಠಿತಗೊಳ್ಳವುದಿಲ್ಲವೇ?

ಊ) ಈ ಉದ್ದೇಶಿತ ಕ್ರೀಡಾಂಗಣ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಅಜಯ ಕುಮಾರ್ ಸರನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) 26.8.95ರಂದು ಕ್ರೀಡಾಂಗಣದ ಕಾರು ನಿಲುಗಡೆಯ ಮೇಲ್ಛಾವಣಿಗೆ ಕಾಂಕ್ರೀಟನ್ನು ಹಾಕಲು ಸಿದ್ದಪಿಡಸಿದ್ದ ಆಧಾರ ಸ್ಥಂಭಗಳು ಕುಸಿದು ಬಿದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಒಬ್ಬರು ಮೃತಪಟ್ಟಿರುತ್ತಾರೆ.

ಇ) ಸ್ಕಾಫೋಲ್ಡಿಂಗ್ ದೋಷದಿಂದ ಈ ಅಪಘಾತವು ಸಂಭವಿಸಿರುತ್ತದೆ.

ಈ) ಇಲ್ಲ.

ಉ) ಇಲ್ಲ.

ಊ) 1995ರ ಡಿಸೆಂಬರ್ ಮಾಹೆಯ ಅಂತ್ಯದೊಳಗೆ.

ಅರಣ್ಯ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ಹುದ್ದೆ ನೀಡದೆ ಇರುವ ಬಗ್ಗೆ.

2252 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?